E-4340897/20
01/07/2022

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯತೆಯುಳ್ಳ(CWSN) ಮಕ್ಕಳಿಗೆ ವಿಶೇಷ ಸೌಲಭ್ಯ/ವಿನಾಯಿತಿಗಳನ್ನು ಸಿಬಿಎಸ್‌ಸಿ ಬೋರ್ಡ್ ಮಾದರಿಯಲ್ಲಿ ನೀಡುವ ಕುರಿತು.

ಓದಲಾಗಿದೆ:- 1) ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿ.ಬಿ.ಎಸ್.ಸಿ.)ರವರ ಸುತ್ತೋಲೆ ಸಂಖ್ಯೆ:CBSE/COORD/112233/2019 ದಿನಾಂಕ:12-04-2019.

2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಪಪೂಶಿಇ/ಶೈಶಾ-04/ಅ.ವಿ.ವಿ.ಹೆ.ಸೌ/2017-18 ದಿನಾಂಕ:28-02-2018.

3) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಏಕ ಕಡತ ಸಂಖ್ಯೆ:DPUE-ACA0OTH/32/2022-ACADEMIC-DEPARTMENT OF PRE UNIVERSITY EDUCATION.

* * *

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ವಿಶೇಷ ಚೇತನ ವಿದ್ಯಾರ್ಥಿಗಳು ಅಥವಾ ವಿವಿಧ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಸಹ ಇತರೆ ಮಕ್ಕಳಂತೆ ಬೆಳೆಯಲು, ವಿಕಸನ ಹೊಂದಲು ಹಾಗೂ ಇತರೆ ಮಕ್ಕಳ ಜೊತೆಯಲ್ಲಿ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಳ್ಳಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಜಾರಿಗೆ ತಂದಿದೆ. ಈ ಹಿನ್ನೆಲೆಯಲ್ಲಿ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್(ಸಿ.ಬಿ.ಎಸ್.ಸಿ.)ರವರು 1 ರಿಂದ 12ನೇ ತರಗತಿಯಲ್ಲಿ ಸಿ.ಬಿ.ಎಸ್.ಸಿ. ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ ಹಾಗೂ ಇತರೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರವಣದೋಷ, ಮೂಕತನ, ಕಲಿಕೆಯಲ್ಲಿ ನ್ಯೂನ್ಯತೆ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಮಾತ್ರ ಮಾಧ್ಯಮದ ಭಾಷೆಯನ್ನು ಹೊರತುಪಡಿಸಿ ಒಂದು ಭಾಷಾ ವಿಷಯಕ್ಕೆ ವಿನಾಯಿತಿ ನೀಡಲಾಗಿರುತ್ತದೆ ಹಾಗೂ ಒಂದು ಗಂಟೆಯ ಹೆಚ್ಚಿನ ಕಾಲಾವಕಾಶ ನೀಡಲಾಗುತ್ತಿದೆ. ಆದರೆ ಶಾಶ್ವತ ವಿಕಲಚೇತನ, ಸಂಪೂರ್ಣ ದೃಷ್ಟಿದೋಷ, ದೃಷ್ಟಿಮಾಂದ್ಯ ಹಾಗೂ ಕ್ಷೀಣದೃಷ್ಟಿ ಇರುವ ವಿದ್ಯಾರ್ಥಿಗಳಿಗೆ ಕೇವಲ ಸಹಾಯಕ ಬರಹಗಾರರು ಹಾಗೂ ಒಂದು ಗಂಟೆ ಹೆಚ್ಚಿನ ಸಮಯಾವಕಾಶ ನೀಡಲಾಗುತ್ತಿದೆ. ಆದರೆ, ರಾಜ್ಯದ ಎಸ್.ಎಸ್.ಎಲ್.ಸಿ. ಪಠ್ಯಕ್ರಮದಲ್ಲಿ ಹಾಗೂ ಸಿ.ಬಿ.ಎಸ್.ಸಿ. ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುವ ಬಹುತೇಕ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮುಂದುವರೆಸುತ್ತಾರೆ. ಸದರಿ ವಿದ್ಯಾರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೆ ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ ವಿನಾಯಿತಿ ಪಡೆದಿದ್ದು, ಪಿಯುಸಿಯಲ್ಲಿ ಹೊಸದಾಗಿ ಕಲಿಯಲು ಕಷ್ಟಸಾಧ್ಯವಾಗುತ್ತದೆ ಎಂದು ಅನೇಕ ಪ್ರಾಂಶುಪಾಲರು, ಪೋಷಕರು ಹಾಗೂ ವಿದ್ಯಾರ್ಥಿಗಳು ಮನವಿ ಸಲ್ಲಿಸಿರುತ್ತಾರೆ.

ಮೇಲೆ ಕ್ರಮಸಂಖ್ಯೆ(3)ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್(ಸಿ.ಬಿ.ಎಸ್.ಸಿ.) ಮತ್ತು ಎಸ್.ಎಸ್.ಎಲ್.ಸಿ. ಮಾದರಿಯಲ್ಲಿ

Scanned with CamScanner

ವಿಶೇಷಚೇತನ ವಿದ್ಯಾರ್ಥಿಗಳು ಅಥವಾ ವಿವಿಧ ಸಾಮರ್ಥ್ಯವುಳ್ಳ (CWSN) ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಭಾಷಾ ವಿನಾಯಿತಿ ಸೌಲಭ್ಯಗಳನ್ನು ಈ ಕೆಳಕಂಡಂತೆ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಅಭ್ಯಾಸ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಸಾಮರ್ಥ್ಯವುಳ್ಳ (CWSN) ವಿದ್ಯಾರ್ಥಿಗಳಿಗೂ 2022-23ನೇ ಸಾಲಿನಿಂದ ವಿಸ್ತರಿಸಿ ಆದೇಶ ಹೊರಡಿಸುವಂತೆ ಪ್ರಸ್ತಾಪಿಸಿರುತ್ತಾರೆ.

ಭಾಷಾ ವಿನಾಯಿತಿ ಸೌಲಭ್ಯ ನೀಡಬೇಕಾಗಿರುವ ನ್ಯೂನ್ಯತೆ ಹಾಗೂ ಸೌಲಭ್ಯಗಳ ವಿವರ

| ಕ್ರಮ ಸಂಖ್ಯೆ | ವಿಷಯ | ವಿಶೇಷ ಸೌಲಭ್ಯಗಳು/ವಿನಾಯಿತಿಗಳು |
|---|---|---|
| 1. | Issuing Authority of medical certificate<br>ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರ. | ಈ ಕೆಳಕಂಡ ಸಂಸ್ಥೆಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲು ಪರಿಗಣಿಸುವುದು.<br>1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿಗಳು/ಸಿವಿಲ್ ಸರ್ಜನ್/ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.<br>2. ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾದಿ.<br>3. ರೀಹಾಬಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ /ಕೇಂದ್ರ ಸರ್ಕಾರ/ಆಯಾ ರಾಜ್ಯ ಸರ್ಕಾರದಲ್ಲಿ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ. |
| 2. | Facility of scribe and compensatory time.<br>ಬರಹಗಾರರ ಸೌಲಭ್ಯ ಮತ್ತು ಹೆಚ್ಚುವರಿ ಸಮಯ. | • ವಿಶೇಷ ಚೇತನರ ಹಕ್ಕುಗಳ ಅಧಿನಿಯಮ 2016ರನ್ವಯ ವಿವಿಧ ಪ್ರಕಾರದ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯ ಅಥವಾ ಹೆಚ್ಚುವರಿ ಸಮಯದ ಅಥವಾ ಎರಡನ್ನು ಪಡೆಯುವ ಅವಕಾಶ.<br>• ಮೂರು ಗಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡುವುದು.<br>• ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಹಾಯಕ ಬರಹಗಾರರಿಗೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬದಲಿ ಇನ್ನೊಬ್ಬ ಸಹಾಯಕರನ್ನು ನೇಮಿಸಬಹುದಾಗಿದೆ. ಆದರೆ ಇಬ್ಬರಿಗಿಂತ ಹೆಚ್ಚಿನ ಸಹಾಯಕರನ್ನು ನೇಮಿಸಿಕೊಳ್ಳುವಂತಿಲ್ಲ. ಸದರಿ ವಿದ್ಯಾರ್ಥಿಗಳ ಮಾಹಿತಿಯನ್ನು ಅಂಧ ಹಾಗೂ ವಿಕಲ ಚೇತನ ವಿದ್ಯಾರ್ಥಿಯು ಪ್ರಾಂಶುಪಾಲರಿಗೆ |

Scanned with CamScanner

| | | |
|---|---|---|
| | | ಮುಂಚಿತವಾಗಿ ನೀಡಿ ಅನುಮತಿ ಪಡೆಯತಕ್ಕದ್ದು.<br>• ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುವವರನ್ನೇ ಸಹಾಯಕರನ್ನಾಗಿ ನೇಮಕ ಮಾಡಿಕೊಳ್ಳಬಹುದಾಗಿದೆ. ಇಂತಹ ನೇಮಕಗೊಂಡ ಸಹಾಯಕ ಬರಹಗಾರರಿಗೆ ಪ್ರಾಂಶುಪಾಲರು ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪ್ರತಿ ಒಂದು ವಿಷಯಕ್ಕೆ ರೂ.100/-ರಂತೆ ಸಹಾಯಕರಿಗೆ ಸಂಭಾವನೆಯಾಗಿ ನೀಡತಕ್ಕದ್ದು.<br>• ವಿದ್ಯಾರ್ಥಿಯು ತಮ್ಮ ಸ್ವಂತ ಇಚ್ಛೆಯಂತೆ ಸಹಾಯಕರನ್ನು/ಬರಹಗಾರರನ್ನು ನೇಮಿಸಿಕೊಂಡಲ್ಲಿ ಅಂತಹ ಸಂದರ್ಭದಲ್ಲಿ ಪೋಷಕರು ಸ್ವಂತ ವೆಚ್ಚದಲ್ಲಿ ನಿಯಮಾನುಸಾರ ಸಹಾಯಕರನ್ನು ನೇಮಿಸಿಕೊಳ್ಳಬಹುದಾಗಿದೆ ಹಾಗೂ ಅವರ ಸಂಪೂರ್ಣ ಮಾಹಿತಿಯನ್ನು ಪರೀಕ್ಷೆಗೆ ಮೊದಲೇ ಪ್ರಾಂಶುಪಾಲರಿಗೆ ಅವರ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿರುವಂತೆ ಭರ್ತಿ ಮಾಡಿ ತಿಳಿಸುವುದು.<br>• ವಿಕಲ ಚೇತನ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯವನ್ನು ಪ್ರಾಂಶುಪಾಲರಾಗಲಿ ಅಥವಾ ಪರೀಕ್ಷಾರ್ಥಿಯು ತಾನೇ ನೇಮಿಸಿಕೊಂಡಲ್ಲಿ ಬರಹಗಾರರ ವಿದ್ಯಾರ್ಹತೆಯು ಪರೀಕ್ಷಾರ್ಥಿಯ ವಿದ್ಯಾರ್ಹತೆಗಿಂತ ಒಂದು ಹಂತ ಕಡಿಮೆಯಿರತಕ್ಕದ್ದು. |
| 3. | All kinds of Disability.<br>ಎಲ್ಲಾ ರೀತಿಯ ನ್ಯೂನ್ಯತೆ. | • ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು.<br>• ಉತ್ತರ ಪತ್ರಿಕೆಯ ಮುಖಪುಟದಲ್ಲಿ ಹಸಿರು ಸ್ಟಿಕ್ಕರ್ ಅಂಟಿಸುವುದು.<br>• ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಬರಹಗಾರರ ಸೌಲಭ್ಯ ಪಡೆಯದೇ ಕೇವಲ ಓದುಗಾರರ ಸೌಲಭ್ಯವನ್ನು ಇಚ್ಛಿಸಿದ್ದಲ್ಲಿ ಪಡೆಯಬಹುದಾಗಿದೆ. |
| 4. | Exemption from language,<br>ಭಾಷಾ ವಿನಾಯಿತಿ ನೀಡಬೇಕಾಗಿರುವ ನ್ಯೂನ್ಯತೆಗಳು | ಕುಷ್ಠರೋಗ ವಾಸಿಯಾದ ವ್ಯಕ್ತಿಗಳು, ಸೆರೆಬ್ರಲ್ ಪಾಲ್ಸಿ ಕುಬ್ಜತೆ, ಆಸಿಡ್ ದಾಳಿ ಸಂತ್ರಸ್ತರು, ಮಾತು ಮತ್ತು ಭಾಷಾ ಅಸಾಮರ್ಥ್ಯತೆ, ಕಲಿಕ ನ್ಯೂನತೆ(-ಡಿಸ್ಲೆಕ್ಸಿಯಾ, -ಡಿಸ್ಗ್ರಾಫಿಯಾ, -ಡಿಸ್ಕಾಲ್ಕುಲಿಯಾ, -ಡಿಸ್ಪ್ರೇಸಿಯಾ, -ಡೆವಲಪ್‌ಮೆಂಟಲ್ ಅಫೇಸಿಯಾ), ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್, ಕ್ರೂನಿಕ್ ನ್ಯೂರೋಲಾಜಿಕಲ್ ಕಂಡಿಷನ್-<br>i) ಮಲ್ಟಿಪಲ್ ಸ್ಕ್ಲೆರೋಸಿಸ್, ii) ಪಾರ್ಕಿನ್ಸನ್ ಕಾಯಿಲೆ |

Scanned with CamScanner

| | | |
|---|---|---|
| | | Blood Disorders- i) ಹಿಮೋಫಿಲಿಯಾ, ii) ಥಲಸ್ಸೆಮಿಯಾ, iii) Sickle cell Disease, ಬಹು ಅಂಗವೈಕಲ್ಯತೆ, ಅಂಗವೈಕಲ್ಯ (Locomotor Disability), ಸ್ಪಾಸ್ಟಿಕ್, ಕಿವುಡುತನ, ಮೂಕತನ, ಮಸ್ಕ್ಯೂಲರ್ ಡಿಸ್ಟ್ರೋಫಿ, ಕಲಿಕಾ ನ್ಯೂನ್ಯತೆ, ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿಗಳು/ಕ್ಷೀಣ ದೃಷ್ಟಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮದ ಭಾಷೆಯನ್ನು ಹೊರತುಪಡಿಸಿ ಉಳಿದ ಒಂದು ಭಾಷೆಗೆ ವಿನಾಯಿತಿ ಹಾಗೂ ಒಂದು ಗಂಟೆಗಳ ಹೆಚ್ಚುವರಿ ಸಮಯಾವಕಾಶ ನೀಡುವ ಸೌಲಭ್ಯ |
| 5. | Facilities to diabetic students.<br>ಮಧುಮೇಹ ವಿದ್ಯಾರ್ಥಿಗಳಿಗೆ. | ಪರೀಕ್ಷೆಯ ನಡುವೆ ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಅವಶ್ಯವಿದ್ದಲ್ಲಿ ಮಧುಮೇಹಕ್ಕೆ ಸಂಬಂಧಿಸಿದ ಪದಾರ್ಥಗಳನ್ನು ತಿನ್ನಲು ನೀಡುವುದು.(ವಿದ್ಯಾರ್ಥಿಗಳೂ ಪರೀಕ್ಷೆಯ ಮೊದಲೇ ಪದಾರ್ಥಗಳನ್ನು ಮೇಲ್ವಿಚಾರಕರಿಗೆ ಒಪ್ಪಿಸುವುದು). |
| 6. | ಶುಲ್ಕ ವಿನಾಯಿತಿ<br>Waiving of Registration Fee | ವಿಭಿನ್ನ ಸಾಮರ್ಥ್ಯವುಳ್ಳ ಮಕ್ಕಳಿಗೆ ನೊಂದಣಿ ಶುಲ್ಕ ಮುಖ್ಯ ಪರೀಕ್ಷೆ ಹಾಗೂ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡುವುದು. |
| 7. | ಪರೀಕ್ಷೆಯ ಸಮಯದಲ್ಲಿ ಸಹಾಯಕ ಸಾಧನಗಳನ್ನು ಅನುಮತಿಸುವುದು (ವೈದ್ಯರ ಸಲಹೆಯೊಂದಿಗೆ) | ಪರೀಕ್ಷೆಯಲ್ಲಿ ಸರಳ ಕಲನ ಯಂತ್ರ ಉಪಯೋಗಿಸಲು ಅನುಮತಿ ನೀಡುವುದು. ಭೂತಗನ್ನಡಿಯ/ಪೋರ್ಟಬಲ್ ವಿಡಿಯೋ ವರ್ಧಕಗಳನ್ನು ಬಳಸಲು ಅನುಮತಿಸುವುದು. |
| 8. | ದೃಷ್ಟಿಮಾಂದ್ಯ/ಅಂಧ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಕ್ಕೆ ಬದಲಾಗಿ ತಾತ್ವಿಕ ಪತ್ರಿಕೆಯನ್ನು ಒದಗಿಸುವುದು. | ದೃಷ್ಟಿದೋಷ, ದೃಷ್ಟಿಮಾಂದ್ಯ ಹಾಗೂ ಕ್ಷೀಣದೃಷ್ಟಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಕ್ಕೆ ಬದಲಾಗಿ ಪ್ರಾಯೋಗಿಕ ವಿಷಯದ ಅಂಕಕ್ಕೆ ಸಮನಾದ ತಾತ್ವಿಕ ಪತ್ರಿಕೆಯನ್ನು ಒದಗಿಸುವುದು. |
| 9. | ಹಾಜರಾತಿ ವಿನಾಯಿತಿ (ಕೋರಿಕೆ ಮೇರೆಗೆ ) | ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿಯಿಂದ ವಿನಾಯಿತಿ(ಶೇ.50 ರವರೆಗೆ) ನೀಡುವುದು. |
| 10. | ವಿಶೇಷ ಸೂಚನೆಗಳು | ವಿಕಲ ಚೇತನ ಮಕ್ಕಳಿಗೆ ಬರಹಗಾರರ/ಓದುಗಾರರ /ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಪ್ರಾಂಶುಪಾಲರು ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರ ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.<br><br>ಬರಹಗಾರರ/ಓದುಗಾರರ/ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಹೊರತುಪಡಿಸಿ ಉಳಿದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಪ್ರಾಂಶುಪಾಲರು ಅಗತ್ಯ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವುದು. |

ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸುತ್ತೋಲೆ ದಿನಾಂಕ:28-02-2018ರಲ್ಲಿ ಶ್ರವಣದೋಷ, ಮೂಕತನ, ಕಲಿಕೆಯಲ್ಲಿ ನ್ಯೂನ್ಯತೆ ಹಾಗೂ ಬುದ್ಧಿಮಾಂದ್ಯ

ವಿದ್ಯಾರ್ಥಿಗಳಿಗೆ ಮಾತ್ರ ಮಾಧ್ಯಮದ ಭಾಷೆಯನ್ನು ಹೊರತುಪಡಿಸಿ ಒಂದು ಭಾಷಾ ವಿಷಯಕ್ಕೆ ವಿನಾಯಿತಿ ಹಾಗೂ ಒಂದು ಗಂಟೆಗಳ ಹೆಚ್ಚಿನ ಕಾಲಾವಕಾಶ ನೀಡಲಾಗುತ್ತಿದೆ. ಆದರೆ, ಶಾಶ್ವತ ವಿಕಲಚೇತನ, ಸಂಪೂರ್ಣ ದೃಷ್ಟಿದೋಷ, ದೃಷ್ಟಿಮಾಂದ್ಯ ಹಾಗೂ ಕ್ಷೀಣದೃಷ್ಟಿ ಇರುವ ವಿದ್ಯಾರ್ಥಿಗಳಿಗೆ ಕೇವಲ ಸಹಾಯಕ ಬರಹಗಾರರು ಹಾಗೂ ಒಂದು ಗಂಟೆ ಹೆಚ್ಚಿನ ಸಮಯಾವಕಾಶ ನೀಡಲಾಗುತ್ತಿದೆ. ಆದರೆ, ರಾಜ್ಯದ ಎಸ್.ಎಸ್.ಎಲ್.ಸಿ. ಪಠ್ಯಕ್ರಮದಲ್ಲಿ ಹಾಗೂ ಸಿ.ಬಿ.ಎಸ್.ಸಿ. ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುವ ಬಹುತೇಕ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮುಂದುವರೆಸುತ್ತಾರೆ. ಸದರಿ ವಿದ್ಯಾರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೆ ದ್ವಿತೀಯ ಹಾಗೂ ತೃತೀಯ ಭಾಷೆಗಳಿಗೆ ವಿನಾಯಿತಿ ಪಡೆದಿದ್ದು, ಪಿ.ಯು.ಸಿಯಲ್ಲಿ ಹೊಸದಾಗಿ ಕಲಿಯಲು ಕಷ್ಟಸಾಧ್ಯವಾಗುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, ಭಾಷಾ ವಿನಾಯಿತಿ ಸೌಲಭ್ಯವನ್ನು 2022-23ನೇ ಸಾಲಿನಿಂದ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ ವಿವಿಧ ಸಾಮರ್ಥ್ಯವುಳ್ಳ (CWSN) ವಿದ್ಯಾರ್ಥಿಗಳಿಗೆ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್(ಸಿ.ಬಿ.ಎಸ್.ಸಿ.) ಮತ್ತು ಎಸ್.ಎಸ್.ಎಲ್.ಸಿ. ಮಾದರಿಯಲ್ಲಿಯೇ ಸೌಲಭ್ಯಗಳನ್ನು ವಿಸ್ತರಿಸಲು ನಿರ್ಣಯಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 40 ಟಿಪಿಯು 2022,**
**ಬೆಂಗಳೂರು, ದಿನಾಂಕ:24-06-2022.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಅಭ್ಯಾಸ ಮಾಡುತ್ತಿರುವ ವಿಶೇಷ ಅಗತ್ಯತೆಯುಳ್ಳ(CWSN) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, 2022-23ನೇ ಸಾಲಿನಿಂದ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವ್ಯಾಸಂಗ ಮಾಡುವ ವಿವಿಧ ಸಾಮರ್ಥ್ಯವುಳ್ಳ (CWSN) ವಿದ್ಯಾರ್ಥಿಗಳಿಗೆ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್(ಸಿ.ಬಿ.ಎಸ್.ಸಿ) ಮತ್ತು ಎಸ್.ಎಸ್.ಎಲ್.ಸಿ. ಮಾದರಿಯಲ್ಲಿಯೇ ಭಾಷಾ ವಿನಾಯಿತಿ ಸೌಲಭ್ಯವನ್ನು ಹಾಗೂ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಆದೇಶಿಸಿದೆ.

| ಕ್ರಮ ಸಂಖ್ಯೆ | ವಿಷಯ | ವಿಶೇಷ ಸೌಲಭ್ಯಗಳು/ವಿನಾಯಿತಿಗಳು |
|---|---|---|
| 1 | Issuing Authority of medical certificate<br>ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರ. | ಈ ಕೆಳಕಂಡ ಸಂಸ್ಥೆಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲು ಪರಿಗಣಿಸುವುದು.<br><br>1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿಗಳು/ಸಿವಿಲ್ ಸರ್ಜನ್/ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.<br><br>2. ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾದಿ.<br><br>3. ರೀಹಾಬಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ /ಕೇಂದ್ರ ಸರ್ಕಾರ/ಆಯಾ ರಾಜ್ಯ ಸರ್ಕಾರದಲ್ಲಿ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ. |

Scanned with CamScanner

| | | |
|---|---|---|
| 2. | Facility of scribe and compensatory time.<br>ಬರಹಗಾರರ ಸೌಲಭ್ಯ ಮತ್ತು ಹೆಚ್ಚುವರಿ ಸಮಯ. | • ವಿಶೇಷ ಚೇತನರ ಹಕ್ಕುಗಳ ಅಧಿನಿಯಮ 2016ರನ್ವಯ ವಿವಿಧ ಪ್ರಕಾರದ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯ ಅಥವಾ ಹೆಚ್ಚುವರಿ ಸಮಯದ ಅಥವಾ ಎರಡನ್ನು ಪಡೆಯುವ ಅವಕಾಶ.<br>• ಮೂರು ಗಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡುವುದು.<br>• ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಹಾಯಕ ಬರಹಗಾರರಿಗೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬದಲಿ ಇನ್ನೊಬ್ಬ ಸಹಾಯಕರನ್ನು ನೇಮಿಸಬಹುದಾಗಿದೆ. ಆದರೆ ಇಬ್ಬರಿಗಿಂತ ಹೆಚ್ಚಿನ ಸಹಾಯಕರನ್ನು ನೇಮಿಸಿಕೊಳ್ಳುವಂತಿಲ್ಲ. ಸದರಿ ವಿದ್ಯಾರ್ಥಿಗಳ ಮಾಹಿತಿಯನ್ನು ಅಂಧ ಹಾಗೂ ವಿಕಲ ಚೇತನ ವಿದ್ಯಾರ್ಥಿಯು ಪ್ರಾಂಶುಪಾಲರಿಗೆ ಮುಂಚಿತವಾಗಿ ನೀಡಿ ಅನುಮತಿ ಪಡೆಯತಕ್ಕದ್ದು.<br>• ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುವವರನ್ನೇ ಸಹಾಯಕರನ್ನಾಗಿ ನೇಮಕ ಮಾಡಿಕೊಳ್ಳಬಹುದಾಗಿದೆ. ಇಂತಹ ನೇಮಕಗೊಂಡ ಸಹಾಯಕ ಬರಹಗಾರರಿಗೆ ಪ್ರಾಂಶುಪಾಲರು ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪ್ರತಿ ಒಂದು ವಿಷಯಕ್ಕೆ ರೂ.100/-ರಂತೆ ಸಹಾಯಕರಿಗೆ ಸಂಭಾವನೆಯಾಗಿ ನೀಡತಕ್ಕದ್ದು.<br>• ವಿದ್ಯಾರ್ಥಿಯು ತಮ್ಮ ಸ್ವಂತ ಇಚ್ಛೆಯಂತೆ ಸಹಾಯಕರನ್ನು/ಬರಹಗಾರರನ್ನು ನೇಮಿಸಿಕೊಂಡಲ್ಲಿ ಅಂತಹ ಸಂದರ್ಭದಲ್ಲಿ ಪೋಷಕರು ಸ್ವಂತ ವೆಚ್ಚದಲ್ಲಿ ನಿಯಮಾನುಸಾರ ಸಹಾಯಕರನ್ನು ನೇಮಿಸಿಕೊಳ್ಳಬಹುದಾಗಿದೆ ಹಾಗೂ ಅವರ ಸಂಪೂರ್ಣ ಮಾಹಿತಿಯನ್ನು ಪರೀಕ್ಷೆಗೆ ಮೊದಲೇ ಪ್ರಾಂಶುಪಾಲರಿಗೆ ಅವರ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿರುವಂತೆ ಭರ್ತಿ ಮಾಡಿ ತಿಳಿಸುವುದು.<br>• ವಿಕಲ ಚೇತನ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯವನ್ನು ಪ್ರಾಂಶುಪಾಲರಾಗಲಿ ಅಥವಾ ಪರೀಕ್ಷಾರ್ಥಿಯು ತಾನೇ ನೇಮಿಸಿಕೊಂಡಲ್ಲಿ ಬರಹಗಾರರ ವಿದ್ಯಾರ್ಹತೆಯು ಪರೀಕ್ಷಾರ್ಥಿಯ ವಿದ್ಯಾರ್ಹತೆಗಿಂತ ಒಂದು ಹಂತ ಕಡಿಮೆಯಿರತಕ್ಕದ್ದು. |

Scanned with CamScanner

| | | |
|---|---|---|
| 3. | All kinds of Disability.<br>ಎಲ್ಲಾ ರೀತಿಯ ನ್ಯೂನ್ಯತೆ. | • ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು.<br>• ಉತ್ತರ ಪತ್ರಿಕೆಯ ಮುಖಪುಟದಲ್ಲಿ ಹಸಿರು ಸ್ಟಿಕ್ಕರ್ ಅಂಟಿಸುವುದು.<br>• ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಬರಹಗಾರರ ಸೌಲಭ್ಯ ಪಡೆಯದೇ ಕೇವಲ ಓದುಗಾರರ ಸೌಲಭ್ಯವನ್ನು ಇಚ್ಛಿಸಿದ್ದಲ್ಲಿ ಪಡೆಯಬಹುದಾಗಿದೆ. |
| 4. | Exemption from language<br>ಭಾಷಾ ವಿನಾಯಿತಿ ನೀಡಬೇಕಾಗಿರುವ ನ್ಯೂನ್ಯತೆಗಳು | ಕುಷ್ಟರೋಗ ವಾಸಿಯಾದ ವ್ಯಕ್ತಿಗಳು, ಸೆರೆಬ್ರಲ್ ಪಾಲ್ಸಿ, ಕುಬ್ಜತೆ, ಆಸಿಡ್ ದಾಳಿ ಸಂತ್ರಸ್ತರು, ಮಾತು ಮತ್ತು ಭಾಷಾ ಅಸಾಮರ್ಥ್ಯತೆ, ಕಲಿಕ ನ್ಯೂನತೆ(–ಡಿಸ್ಲೆಕ್ಸಿಯಾ, –ಡಿಸ್ಗ್ರಾಫಿಯಾ, –ಡಿಸ್ಕಾಲ್ಕುಲಿಯಾ, –ಡಿಸ್ಪ್ರೇಸಿಯಾ, –ಡೆವಲಪ್‌ಮೆಂಟಲ್ ಅಫೇಸಿಯಾ), ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್, ಕ್ರೂನಿಕ್ ನ್ಯೂರೋಲಾಜಿಕಲ್ ಕಂಡಿಷನ್– i) ಮಲ್ಟಿಪಲ್ ಸ್ಕ್ಲೆರೋಸಿಸ್, ii). ಪಾರ್ಕಿನ್ಸನ್ ಕಾಯಿಲೆ Blood Disorders- i) ಹಿಮೋಫಿಲಿಯಾ, ii) ಥಲಸ್ಸೆಮಿಯಾ, iii) Sickle cell Disease, ಬಹು ಅಂಗವೈಕಲ್ಯತೆ, ಅಂಗವೈಕಲ್ಯ (Locomotor Disability), ಸ್ಪಾಸ್ಟಿಕ್, ಕಿವುಡುತನ, ಮೂಕತನ, ಮಸ್ಕ್ಯೂಲರ್ ಡಿಸ್ಟ್ರೋಫಿ, ಕಲಿಕಾ ನ್ಯೂನ್ಯತೆ, ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿಗಳು/ಕ್ಷೀಣ ದೃಷ್ಟಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮದ ಭಾಷೆಯನ್ನು ಹೊರತುಪಡಿಸಿ ಉಳಿದ ಒಂದು ಭಾಷೆಗೆ ವಿನಾಯಿತಿ ಹಾಗೂ ಒಂದು ಗಂಟೆಗಳ ಹೆಚ್ಚುವರಿ ಸಮಯಾವಕಾಶ ನೀಡುವ ಸೌಲಭ್ಯ |
| 5. | Facilities to diabetic students.<br>ಮಧುಮೇಹ ವಿದ್ಯಾರ್ಥಿಗಳಿಗೆ. | ಪರೀಕ್ಷೆಯ ನಡುವೆ ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಅವಶ್ಯವಿದ್ದಲ್ಲಿ ಮಧುಮೇಹಕ್ಕೆ ಸಂಬಂಧಿಸಿದ ಪದಾರ್ಥಗಳನ್ನು ತಿನ್ನಲು ನೀಡುವುದು.(ವಿದ್ಯಾರ್ಥಿಗಳೂ ಪರೀಕ್ಷೆಯ ಮೊದಲೇ ಪದಾರ್ಥಗಳನ್ನು ಮೇಲ್ವಿಚಾರಕರಿಗೆ ಒಪ್ಪಿಸುವುದು). |
| 6. | ಶುಲ್ಕ ವಿನಾಯಿತಿ<br>Waiving of Registration Fee | ವಿಭಿನ್ನ ಸಾಮರ್ಥ್ಯವುಳ್ಳ ಮಕ್ಕಳಿಗೆ ನೊಂದಣಿ ಶುಲ್ಕ, ಮುಖ್ಯ ಪರೀಕ್ಷೆ ಹಾಗೂ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡುವುದು. |
| 7. | ಪರೀಕ್ಷೆಯ ಸಮಯದಲ್ಲಿ ಸಹಾಯಕ ಸಾಧನಗಳನ್ನು ಅನುಮತಿಸುವುದು (ವೈದ್ಯರ ಸಲಹೆಯೊಂದಿಗೆ) | ಪರೀಕ್ಷೆಯಲ್ಲಿ ಸರಳ ಕಲನ ಯಂತ್ರ ಉಪಯೋಗಿಸಲು ಅನುಮತಿ ನೀಡುವುದು. ಭೂತಗನ್ನಡಿಯ/ಪೋರ್ಟಬಲ್ ವಿಡಿಯೋ ವರ್ಧಕಗಳನ್ನು ಬಳಸಲು ಅನುಮತಿಸುವುದು. |
| 8. | ದೃಷ್ಟಿಮಾಂದ್ಯ/ಅಂಧ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಕ್ಕೆ ಬದಲಾಗಿ ತಾತ್ವಿಕ ಪತ್ರಿಕೆಯನ್ನು ಒದಗಿಸುವುದು. | ದೃಷ್ಟಿದೋಷ, ದೃಷ್ಟಿಮಾಂದ್ಯ ಹಾಗೂ ಕ್ಷೀಣದೃಷ್ಟಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಕ್ಕೆ ಬದಲಾಗಿ ಪ್ರಾಯೋಗಿಕ ವಿಷಯದ ಅಂಕಕ್ಕೆ ಸಮನಾದ ತಾತ್ವಿಕ ಪತ್ರಿಕೆಯನ್ನು ಒದಗಿಸುವುದು. |

Scanned with CamScanner

| | | |
|---|---|---|
| 9. | ಹಾಜರಾತಿ ವಿನಾಯಿತಿ (ಕೋರಿಕೆ ಮೇರೆಗೆ ) | ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿಯಿಂದ ವಿನಾಯಿತಿ(ಶೇ.50 ರವರೆಗೆ) ನೀಡುವುದು. |
| 10. | ವಿಶೇಷ ಸೂಚನೆಗಳು | ವಿಕಲ ಚೇತನ ಮಕ್ಕಳಿಗೆ ಬರಹಗಾರರ/ಓದುಗಾರರ /ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಪ್ರಾಂಶುಪಾಲರು ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರ ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.<br><br>ಬರಹಗಾರರ/ಓದುಗಾರರ/ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಹೊರತುಪಡಿಸಿ ಉಳಿದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಪ್ರಾಂಶುಪಾಲರು ಅಗತ್ಯ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವುದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Padmini S.N 24/6/12
(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
3. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ಎಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ. (ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮುಖಾಂತರ).
5. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮುಖಾಂತರ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

Scanned with CamScanner